ದಿನಾಂಕ 05.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಸಿ.ಎಸ್.ಎಂ. ವಕೀಲರು ಹಾಜರಿದ್ದು, ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ- ಶ್ರೀ. ಎ.ಬಿ. ವಕೀಲರಿಂದಃ-

ಅಪಘಾತ ಸಂದರ್ಭದಲ್ಲಿ ನಾನು ನನ್ನ ಗಂಡನೊಂದಿಗೆ ಕಾರಿನಲ್ಲಿ ಗೋಣಿಕೊಪ್ಪದಿಂದ ವಿರಾಜಪೇಟೆ ಕಡೆಗೆ ಹೋಗುತ್ತಿದ್ದೇವು. 1 ನೇ ಎದುರುದಾರರು ವಿರಾಜಪೇಟೆಯಿಂದ ಗೋಣಿಕೊಪ್ಪ ಕಡೆಗೆ ಬರುತ್ತಿದ್ದರು. ಅಪಘಾತವು ರಾತ್ರಿ 8 ರಿಂದ 8.30 ರ ಸಮಯದಲ್ಲಿ ಆಗಿರುತ್ತದೆ. ಸದರಿ ಅಪಘಾತದಲ್ಲಿ ಎರಡು ವಾಹನಗಳು ಮುಖಾಮುಖಿ ಡಿಕ್ಕಿಯಾಗಿರುತ್ತದೆ. ಅಪಘಾತವು ರಸ್ತೆಯ ಮಧ್ಯಭಾಗದಲ್ಲಿ ಆಗಿರುತ್ತದೆ. ಅಪಘಾತವು ನನ್ನ ಗಂಡನ ಅತಿವೇಗ ಮತ್ತು ಅಜಾರೂಕತೆಯಿಂದ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಗೋಣಿಕೊಪ್ಪದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನನಗೆ ಅಪಘಾತದಿಂದ ತೀವ್ರ ಸ್ವರೂಪದ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವಂತೆ ಅಪೋಲೋ ಆಸ್ಪತ್ರೆಯಲ್ಲಿ ರೂ. 614691/- ವ್ಯಹಿಸಿರುವುದಿಲ್ಲ ಎಂದೆರ ಸರಿಯಲ್ಲ. ನಿಶಾನೆ ಪಿ. 9 ರಲ್ಲಿ ಇತರೆ ಬಿಲ್ಲುಗಳು ಸಹ ಸೇರಿವೆ. ಅಪಘಾತದಿಂದ ನನಗೆ ಯಾವುದೇ ರೀತಿಯ ಭಾಗಶಃ ಅಥವಾ ಶಾಶ್ವತ ಅಂಗನ್ಯೂನತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯಗಳಿಂದ ನನ್ನ ಗಳಿಕಾ ಸಾಮರ್ಥ್ಯವನ್ನು ನಾನು ಕಳೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಪೋಲೋ ಆಸ್ಪತ್ರೆಯ ವೈದ್ಯಕೀಯ ಬಿಲ್ಲುಗಳನ್ನು ಹೊರತುಪಡಿಸಿ ಉಳಿದ ವೈದ್ಯಕೀಯ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವಂತೆ ನನಗೆ ಯಾವುದೇ

ಶಸ್ತ್ರಚಿಕಿತ್ಸೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರವನ್ನು ನೀಡಲು 3 ನೇ ಎದುರುದಾರರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**1** ಮತ್ತು **2** ನೇ ಪರ ವಕೀಲರು ಗೈರು ಹಾಜರಾಗಿದ್ದು**,** ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**.**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.